ಶ್ರೀ ವೀರೇಂದ್ರ ಪಾಟೀಲ್.—ಇದನ್ನೆಲ್ಲಾ ಪೂರ್ಣವಾಗಿ ವಿಚಾರ ಮಾಡಬೇಕಾಗುತ್ತದೆ.

Principles followed while nominating the Members to the City Improvement Trust Board, Bangalore.

*Q.—523. Sri D. MUNICHINNAPPA (Bangalore South).—

Will the Government be pleased to state :—

(a) the principles followed by them while nominating the present members to the City Improvement Trust Board, Bangalore;

(b) whether it is a fact that the Board has acquried the lands of the Ryots in Bangalore North and South Taluks;

(c) whether they would take action to nominate the Assembly Members of the Bangalore North and South Taluks to the City Improvement Trust Board in order to redress the grievances of the Ryots whose lands have been acquired in that area ?

A.—Sri K. PUTTASWAMY (Minister for Municipal Administration).—

(a) Under Section 4 of the City of Bangalore Improvement Act 1945, the Chairman and six trustees will be appointed by Government and four trustees will be elected by the Corporators of the Corporation of the City of Bangalore out of their own body.

(b) Yes.

(c) This is not considered necessary.

Term of Bangalore City Improvement Trust Board.

*Q.—550. Sri P. VENKATAGIRIYAPPA (Kolar).—

Will the Government be pleased to state :—

(a) when the term of Bangalore City Improvement Trust Board expires;

(b) whether they have nominated trustees in the Board;

(c) what are the qualifications prescribed for the trustees to be nominated in the Trust Board ?

A.—Sri K. PUTTASWAMY (Minister for Municipal Administration.)—

(a) It expired on 9th March 1964.

(b) Yes.

(c) No qualifications have been prescribed.

ಶ್ರೀ ಡಿ. ಮುನಿಚಿನ್ನಪ್ಪ.—ಟ್ರಸ್ಟ್ ಬೋರ್ಡ್‌ನವರು ರೈತರಿಂದ ಜಮೀನನ್ನು ಪಡೆದು ಸೈಟು ಗಳನ್ನು ಮಾಡುವಾಗ ಎಕರೆಯೊಂದಕ್ಕೆ 2,500 ರಿಂದ 5,000 ರೂಪಾಯಿಗಳವರೆಗೆ ಕೊಡುತ್ತಿರುವುದು ನಿಜವೇ ?

ಶ್ರೀ ಕೆ. ಪುಟ್ಟಸ್ವಾಮಿ.—ಲ್ಯಾಂಡು ಅಕ್ವಿಜಿಷನ್ನು ರೂಲ್ಸು ಪ್ರಕಾರ ಜಮೀನಿನ ಕಿಮ್ಮತ್ತು ಎಷ್ಟಾಗುತ್ತದೋ ಅದರ ಮೇಲೆ ಪರಿಹಾರ ಕೊಡುತ್ತಾರೆ. ಮಾಲೀಕರು ಆ ಪರಿಹಾರಕ್ಕೆ ಸಮಾಧಾನವಿಲ್ಲದೇ ಹೋದರೆ ಸಿವಿಲ್ ಕೋರ್ಟಿನಲ್ಲಿ ವ್ಯವಹಾರ ನಡೆಸಿ ಪರಿಹಾರವನ್ನು ಹೆಚ್ಚಿಸಿಕೊಳ್ಳುವ ದಕ್ಕೆ ಅವಕಾಶವಿದೆ.

ಶ್ರೀ ಡಿ. ಮುನಿಚಿನ್ನಪ್ಪ.—ಭೂಮಿ ಅಕ್ವೈರು ಮಾಡುವಾಗ ಎಕರೆಯೊಂದಕ್ಕೆ 2,500 ರಿಂದ 5,000 ರೂಪಾಯಿಗಳವರೆಗೆ ಕೊಡುತ್ತಿರುವುದು ನಿಜವಲ್ಲವೇ ?

ಶ್ರೀ ಕೆ. ಪುಟ್ಟಸ್ವಾಮಿ.—ಇದನ್ನು ನಾನು ಹೇಳುವುದಕ್ಕಾಗುವುದಿಲ್ಲ. ಜಮೀನಿನ ಬೆಲೆ ಏನಿದೆಯೋ ಅದರ ಮೇಲೆ ಹೋಗುತ್ತದೆ ಮತ್ತು ಅದರಂತೆ ಕಾಂಪೆನ್‌ಸೇಷನ್ನನ್ನೂ ಕೊಡುತ್ತಾರೆ.

Sri S. RAJAGOPAL.—Supplementary to (c): What are the valuable reasons for it ?

Sri K. PUTTASWAMY.—The Trust Board is constituted under a statute. Government have got powers to nominate. In their best judgment Government have nominated persons.

ಶ್ರೀ ಡಿ. ಮುನಿಚಿನ್ನಪ್ಪ.—ಟ್ರಸ್ಟು ಬೋರ್ಡಿನವರು ಜಮೀನುಗಳನ್ನು ಅಕ್ವೈರು ಮಾಡಿಕೊಳ್ಳುವಾಗ ಅವರಿಗೆ ಬೇರೆ ಕಡೆ ಜಮೀನನ್ನು ಕೊಡುವುದಕ್ಕೆ ಪ್ರಯತ್ನ ಮಾಡಲಾಗುತ್ತದೆಯೇ ?

ಶ್ರೀ ಕೆ. ಪುಟ್ಟಸ್ವಾಮಿ.—ಮಾಲೀಕರು ಅಪೇಕ್ಷೆಪಟ್ಟರೆ ರೆವಿನ್ಯೂ ಕಾನೂನನ್ನು ಅನುಸರಿಸಿ ಜಮೀನನ್ನು ಕೊಡಲಾಗುತ್ತದೆ.

Sri SANJEEVANATH AIKALA.—Who are the members of the Trust Board, when were they nominated and till what time their membership continues ?

Sri K. PUTTASWAMY.—All this information can be had from the Gazette. I expect my Hon'ble Friend who is very active to have known it.

ಶ್ರೀ ಇ. ನಾರಾಯಣಗೌಡ.—ಟ್ರಸ್ಟು ಬೋರ್ಡಿನಲ್ಲಿ ಅಡಳಿತ ಸಮರ್ಪಕವಾಗಿ ನಡೆಯಬೇಕಾಗಿದ್ದರೆ ಖಾಸಗಿಯವರು ಅಧ್ಯಕ್ಷರಾಗಿರುವುದಕ್ಕಿಂತ ಅಧಿಕಾರಿಗಳೇ ಇದ್ದರೆ ದಕ್ಷತೆಯಿಂದ ಕೆಲಸ ನಡೆಸಲು ಅನುಕೂಲವಾಗುತ್ತದೆ ಎಂದು ಈ ಅಧಿಕಾರಿಗಳನ್ನೇ ಛೇರ್ಮನ್ನರಾಗಿ ಮುಂದು ಪರಿಸುತ್ತೀರಾ ?

Sri K. PUTTASWAMY.—I do not agree to that promise.

Sri G. V. GOWDA.—Will the Government consider the feasibility of making it more democratic by amending the City Improvement Trust Board Act and making provision for the election of the members ?

Sri K. PUTTASWAMY.—Government do not consider that it should be made more democratic than what it is.

ಶ್ರೀ ಡಿ. ಮುನಿಚಿನ್ನಪ್ಪ.—ಖಾಸಗಿಯವರು ರೈತರಿಂದ ಜಮೀನನ್ನು ಕೊಂಡು ಕೊಳ್ಳುವಾಗ ಎಕರೆಗೆ 1,500 ರಿಂದ 2,000 ರೂಪಾಯಿ ಎಂದು ಕೊಂಡು ಸ್ಕೆಟುಗಳನ್ನಾಗಿ ಮಾಡಿಕೊಂಡು ಚದುರಗಜಕ್ಕೆ ಹೆಚ್ಚಿನ ಬೆಲೆಯಲ್ಲಿ ಮಾರುತ್ತಿದ್ದಾರೆ. ಅಲ್ಲದೆ ಟ್ರಸ್ಟುಬೋರ್ಡು ಕೂಡ ಹರಾಜು ಮಾಡುವಾಗ ಚದುರಗಜಕ್ಕೆ 30 ರೂಪಾಯಿನಂತೆ ಹಾಗೂ ಕಾರ್ನರ್ ಸ್ಕೆಟು ಆಗಿದ್ದರೆ 150 ರೂಪಾಯಿನಂತೆ ಮಾರುತ್ತಿದ್ದಾರೆ. ಇದೇ ರೀತಿ ರೈತರಿಂದ ಕೊಂಡುಕೊಳ್ಳುವಾಗಲೂ ಅವರಿಗೆ ಕೊಡಲು ಪ್ರಯತ್ನವನ್ನೇಕೆ ಮಾಡಬಾರದು ?

ಶ್ರೀ ಕೆ. ಪುಟ್ಟಸ್ವಾಮಿ.—ಆ ಜಮೀನನ್ನು ಅವರು ವ್ಯವಸಾಯಕ್ಕಾಗಿ ಮಾರಾಟ ಮಾಡುತ್ತಿಲ್ಲ. ಅದನ್ನು ನಣ್ಣ ನಣ್ಣ ತುಂಡುಗಳನ್ನಾಗಿ ಮಾಡಿ ತಿಳಿಯದ ಜನರಿಗೆ ಅವರು ಪೋನ ಮಾಡಿ ಮಾರಾಟ ಮಾಡುತ್ತಿದ್ದಾರೆ. ಇಂಥಾ ವ್ಯವಹಾರವನ್ನು ಇತ್ತೀಚೆಗೆ ಬಹಳ ಕಡಮೆ ಮಾಡಲಾಗಿದೆ.

ಶ್ರೀ ಬಿ. ನಂಜಪ್ಪ.—ಬೆಂಗಳೂರು ನುತ್ತಮುತ್ತ ಇರತಕ್ಕ ಜನಗಳಿಗೆ ಈ ಪರಿಹಾರ 4-5 ವರ್ಷಗಳಾದರೂ ಸಿಕ್ಕದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಪುಟ್ಟಸ್ವಾಮಿ.—ಇದನ್ನು ಫೈನಲ್ ನೋಟಿಫಿಕೇಷನ್ ಇಷ್ಯೂ ಆದ ವರ್ಷವೇ ಕೊಡಲಾಗುತ್ತದೆ. ಇದನ್ನು ಲ್ಯಾಂಡ್ ಅಕ್ವಿಜಿಷನ್ ಆಫೀಸರು ಕೊಡುತ್ತಾರೆ. ಹಿಂದೆ ಎಲ್ಲೋ ಒಂದೆರೆಡು ಕೇಸುಗಳಲ್ಲಿ ಹಾಗೆ ನಿಧಾನವಾಗಿರಬಹುದು. ಇನ್ನು ಮುಂದೆ ಹಾಗಾಗುವುದಕ್ಕೆ ಅವಕಾಶವಿಲ್ಲ.

ಶ್ರೀ ಡಿ. ಮುನಿಯಪ್ಪ.—ಅಲ್ಲಿ ಚದುರಗಜ ಒಂದಕ್ಕೆ 150 ರಿಂದ 300 ರೂಪಾಯಿನ ತನಕ ಜಮೀನು ಮಾರಾಟವಾಗುತ್ತಿರುವುದರಿಂದ ರೈತರಿಗೆ ಸ್ವಲ್ಪ ಹೆಚ್ಚಿನ ಪರಿಹಾರ ನೀಡಲು ಸಹಾಯ ಮಾಡುವುದಕ್ಕಾಗುವುದಿಲ್ಲವೇ ?

ಶ್ರೀ ಕೆ. ಪುಟ್ಟಸ್ವಾಮಿ.—ನಗರಾಭಿವೃದ್ಧಿ ಸಂಸ್ಥೆಯವರು ಈ ವಿಚಾರದಲ್ಲಿ ಲಾಭವನ್ನೇನೂ ಮಾಡುತ್ತಿಲ್ಲ. ಅವರು ಆ ನಿವೇಶನಗಳನ್ನು ಲಾಭ-ನಷ್ಟ ಆಗದ ರೀತಿಯಲ್ಲಿ ಮಾರಾಟ ಮಾಡುತ್ತಿದ್ದಾರೆ. ಆದರೆ ಮಾನ್ಯ ಸದಸ್ಯರು ಹೇಳುವಂಥ ಕೆಲವು ಕಾರ್ನರ್ ಸೈಟುಗಳು ಮತ್ತು ಕೆಲವು ಅಂಗಡಿ ಸೈಟುಗಳು ಸ್ವಲ್ಪ ಹೆಚ್ಚಿನ ಬೆಲೆಗೆ ಹೋಗಬಹುದು. 50 ರೂಪಾಯಿಗೆ ಮೇರೆ ಅಲ್ಲಿ ಯಾವತ್ತೂ ಸೈಟುಗಳು ಮಾರಾಟವಾಗಿಲ್ಲ. ಸಾಮಾನ್ಯವಾದ ಸೈಟುಗಳ ಬೆಲೆ 10 ರೂಪಾಯಿಂದ 18 ರೂಪಾಯಿಗಳವರೆಗೂ ಮಾರಾಟ ನಡೆದಿದೆ.

ಶ್ರೀ ಬಿ. ನಂಜಪ್ಪ.—ಈಗ ಕಾರ್ಪೊರೇಷನ್ನಿನವರನ್ನು ಅಲ್ಲಿ ಟ್ರಸ್ಟಿಗಳನ್ನಾಗಿ ಮಾಡಿರುವಂತೆ ಬೆಂಗಳೂರು ಉತ್ತರ ಮತ್ತು ದಕ್ಷಿಣ ತಾಲ್ಲೂಕಿನ ಜನರನ್ನೂ ಟ್ರಸ್ಟಿಗಳನ್ನಾಗಿ ಮಾಡುವುದು ಒಳ್ಳೆಯ ದಲ್ಲವೇ ?

ಶ್ರೀ ಕೆ. ಪುಟ್ಟಸ್ವಾಮಿ.—ಆ ವಿಚಾರವನ್ನಾಗಲೇ ಸರ್ಕಾರದವರು ತೀರ್ಮಾನ ಮಾಡಿದ್ದಾರೆಂದು ಉತ್ತರವನ್ನು ಹೇಳಿದ್ದೇನೆ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಇನ್ನು ಮುಂದೆ ಈ ಸೈಟುಗಳ ವ್ಯವಹಾರವನ್ನೆಲ್ಲಾ ಖಾಸಗಿಯವರಿಗೆ ಬಿಟ್ಟುಕೊಡದೆ, ಟ್ರಸ್ಟ್‌ಬೋರ್ಡಿನ ಮೂಲಕವೇ ನಡೆಸಿ, ಈಗ ಯಾವ ನೀತಿ ನೇಮ ಇಲ್ಲದಂತೆ ಕೆಲವರಿಗೆ ಮಾತ್ರ ಏಲನೇಟ್ ಮಾಡುತ್ತಿರುವುದನ್ನು ತಪ್ಪಿಸುವುದಕ್ಕಾಗುವುದಿಲ್ಲವೇ ?

ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ಸದಸ್ಯರು ಹೇಳುವುದು ನಿಜವಲ್ಲ. ಕೆಲವು ಖಾಸಗೀ ಜನ ಹಾಗೆ ಮಾರಾಟ ಮಾಡಿರಬಹುದು. ಆ ವಿಚಾರದಲ್ಲಿ ವೇದಿಕೆಗಳ ಮೇಲೂ ಮತ್ತು ಪತ್ರಿಕೆಗಳ ಮೂಲಕ ಸಾರ್ವಜನಿಕರಿಗೆ ಅಂಥ ಜಮೀನುಗಳನ್ನು ಕೊಂಡುಕೊಳ್ಳಬಾರದೆಂದು ತಿಳಿಸಲಾಗಿದೆ. ಇನ್ನು ಏಲನೇಟ್ ಮಾಡತಕ್ಕ ವಿಚಾರದಲ್ಲಿ ನೀತಿ ನೇಮಗಳಿಲ್ಲದೆ ಏಲನೇಟ್ ಮಾಡುತ್ತಾರೆಂದು ಹೇಳಿದ್ದು ಸರಿಯಲ್ಲ.

ಶ್ರೀ ವೈ. ರಾಮಕೃಷ್ಣ.—ಟ್ರಸ್ಟ್‌ಬೋರ್ಡಿನಲ್ಲಿ ಬೊದಲಿಂದಲೂ ಒಬ್ಬ ಷೆಡ್ಯೂಲ್ಡ್ ಪಂಗಡದ ಸದಸ್ಯರನ್ನು ಹಾಕುತ್ತಿದ್ದ ಸಾಂಪ್ರದಾಯ ಇರಲಿಲ್ಲವೇ ?

ಶ್ರೀ ಕೆ. ಪುಟ್ಟಸ್ವಾಮಿ.—ಆ ಸಾಂಪ್ರದಾಯವೇನೆಂಬುದೇ ನನಗೆ ಗೊತ್ತಿಲ್ಲ.

ಶ್ರೀ ವೈ. ರಾಮಕೃಷ್ಣ.—ಈ ಹಿಂದೆ ಇಲ್ಲಿ ಒಬ್ಬರು ಆ ಪಂಗಡದವರು ಇರಲಿಲ್ಲವೇ ?

ಶ್ರೀ ಕೆ. ಪುಟ್ಟಸ್ವಾಮಿ.—ನಂಪ್ರದಾಯವಿದ್ದುದು ಗೊತ್ತಿಲ್ಲ. ಹಿಂದಿನ ಸಾಲಿನಲ್ಲಿ ಒಬ್ಬ ಸದಸ್ಯರಿದ್ದ ವಿಚಾರ ಗೊತ್ತಿದೆ.

ಶ್ರೀ ಡಿ. ಮುನಿಚಿನ್ನಪ್ಪ.—ನಗರಾಭಿವೃದ್ಧಿ ಸಮಿತಿಯಲ್ಲಿ ಬೆಂಗಳೂರು ನಗರದಿಂದ 6 ಜನರನ್ನೂ ಕಾರ್ಪೊರೇಷನ್ನಿನಿಂದ 4 ಜನರನ್ನೂ ತಗೆದುಕೊಂಡಿರುವಾಗ ಜಮೀನನ್ನು ಅಕ್ವಯಿರ್ ಮಾಡಿಕೊಳ್ಳತಕ್ಕ ವಿಚಾರದಲ್ಲಿ ಇವರಪರ ಪ್ರತಿನಿಧಿಗಳು ಇರಬೇಡವೇ ?

ಶ್ರೀ ಕೆ. ಪುಟ್ಟಸ್ವಾಮಿ.—ರೈತರಿಗೆ ಕೊಡತಕ್ಕ ಪರಿಹಾರವನ್ನು ಟ್ರಸ್ಟ್‌ಬೋರ್ಡಿನವರು ತೀರ್ಮಾನ ಮಾಡುವುದಿಲ್ಲ. ಅದನ್ನು ಲ್ಯಾಂಡ್ ಅಕ್ವಿಜಿಷನ್ ಆಫೀಸರು ತೀರ್ಮಾನ ಮಾಡುತ್ತಾರೆ. ಆ ಸೈಟುಗಳೆಲ್ಲಾ ಮುಂದೆ ಕಾರ್ಪೊರೇಷನ್ನಿಗೆ ಸೇರುತ್ತವೆ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಕೆಂಪೇಗೌಡರ ಕಾಲದಿಂದ ಬೆಂಗಳೂರು ಅಕ್ಕಪಕ್ಕದಲ್ಲಿರತಕ್ಕ ರೈತರ ಜಮೀನನ್ನು ಈಗ ಈ ಟ್ರಸ್ಟ್‌ಬೋರ್ಡ್ ಅಕ್ವಯಿರ್ ಮಾಡಿಕೊಳ್ಳುವುದರಿಂದ ಆ ಜನರೆಲ್ಲಾ ನಿರುದ್ಯೋಗಿಗಳಾಗಬೇಕಾಗುವುದು. ಆದ್ದರಿಂದ ಅವರಿಗೆ ಹೆಚ್ಚಿನ ಪರಿಹಾರವನ್ನು ಕೊಟ್ಟು ಅನುಕೂಲಮಾಡುವುದಕ್ಕಾಗುವುದಿಲ್ಲವೇ ?

ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ಸದಸ್ಯರು ಹೇಳಿದಂತೆ ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಜನರು ನಿರುದ್ಯೋಗಿಗಳಾಗಬಹುದೇ ವಿನಾ ಈ ನಗರದ ಹತ್ತಿರ ಇರತಕ್ಕ ಜನರಿಗೆ ಈ ತೊಂದರೆಯೇ ಇಲ್ಲ. ಅವರಿಗೆ ಬೇರೆ ಉದ್ಯೋಗಗಳು ಸಾಕಷ್ಟು ಇಲ್ಲಿ ಸಿಕ್ಕುತ್ತವೆ. ಅವರು ತಮ್ಮ ಜಮೀನನ್ನು ಹೆಚ್ಚು ಕಾಂಪನ್‌ಸೇಷನ್ ಸಿಕ್ಕುತ್ತಿರುವುದರಿಂದ ಮಾರಾಟ ಮಾಡಲು ಇಲ್ಲಿಯ ಜನ ಕಾತುರರಾಗಿದ್ದಾರೆ.

ಶ್ರೀ ಐ. ನಾರಾಯಣಗೌಡ.—ಬಾವಿಗಳಿರತಕ್ಕ ಜಮೀನು ಮತ್ತು ದ್ರಾಕ್ಷೆ ತೋಟ ಇಂಥವುಗಳಿಗೆ ಸಾಕಷ್ಟು ಪರಿಹಾರವನ್ನು ಕೊಡಲಲ್ಲವೆಂದು ಅವರು ಹೈಕೋರ್ಟಿಗೆ ಹೋಗಿ ಹೆಚ್ಚಿನ ಪರಿಹಾರ ಪಡೆದಿದ್ದಾರೆ. ಅಂಥಾದ್ದರಲ್ಲಿ ಈ ಬೋರ್ಡಿನವರೇ ಅವರನ್ನು ಹೈಕೋರ್ಟಿಗೆ ಹೋಗುವುದನ್ನು ತಪ್ಪಿಸಲು ಹೆಚ್ಚಿನ ಪರಿಹಾರವನ್ನೇಕೆ ಕೊಡಬಾರದು ?

Sri K. PUTTASWAMY.—Sir, under the Land Acquisition Act the Land Acquisition Officer is almost a judicial authority and it is not open to Government to say that so and so compensation may be given.

ಶ್ರೀ ಡಿ. ಮುನಿಚಿನ್ನಪ್ಪ.–ಈ ಬಡವರಿಗೆ ಬೇರೆ ಜಮೀನಿಲ್ಲದ ಕಾರಣ ಇವರಿಗೆ ಹೆಚ್ಚಿನ ಪರಿಹಾರವನ್ನು ಕೊಡುವುದಕ್ಕಾದರೂ ಏರ್ಪಾಡು ಮಾಡುತ್ತೀರಾ?

ಶ್ರೀ ಕೆ. ಪುಟ್ಟಸ್ವಾಮಿ.—ಅದು ಲಾಭಮಾಡತಕ್ಕ ಸಂಸ್ಥೆಯಲ್ಲವೆಂದು ಆಗಲೇ ಹೇಳಿದೆ.

Sri SANJEEVANATH AIKALA.—Is it a fact that certain cells function here which try to get sites in the names of their family members and then sell them for higher prices?

Sri K. PUTTASWAMY.—It is not true Sir.

Sri S. RAJAGOPAL.—Are Government aware that some people in the name of building society purchase agricultural land then sell the land as sites?

ಶ್ರೀ ಕೆ. ಪುಟ್ಟಸ್ವಾಮಿ.—ಮೋಸಮಾಡತಕ್ಕ ಜನರಿಗೆ ಏನೂ ಮಾಡುವುದಕ್ಕಾಗುವುದಿಲ್ಲ ಅವರು ಅಂಥಾ ಇಂಜೀನಿಯರ್ಸ್ ಪೀಪರ್.

ಶ್ರೀ ಜಿ. ರಾಮೇಗೌಡ.—ಈ ಅಭಿವೃದ್ಧಿ ಮಂಡಲಿಗೆ ಲಾಭ ಮಾಡತಕ್ಕ ಉದ್ದೇಶವಿಲ್ಲದಿದ್ದರೆ ನೈಟುಗಳನ್ನು ಹರಾಜು ಮಾಡತಕ್ಕ ಉದ್ದೇಶವಾದರೂ ಏನು?

ಶ್ರೀ ಕೆ. ಪುಟ್ಟಸ್ವಾಮಿ.—ನೈಟುಗಳನ್ನು ಹರಾಜು ಮಾಡಿದರೆ ಹೆಚ್ಚಿನ ದುಡ್ಡು ಬರುತ್ತದೆ ನಿಜ ಆದರೆ ಸಾಮಾನ್ಯ ಜನರಿಗೆ ನೈಟುಗಳನ್ನು ಹಂಚುವಾಗ ಸ್ವಲ್ಪ ಕಡಿಮೆ ಬೆಲೆಗೆ ಕೊಡಬಹುದು.

Sri SANJEEVANATH AIKALA.—Does the Government propose to constitute similar Committees in the Cities of Mangalore, Hubli and other Cities?

Mr. SPEAKER.—How does it arise here?

Sri R. N. LAKSHMIPATHI.—Certain lands have been acquired by private persons. When they applied for alienation, they said that the lands are required for Agricultural College. May I know whether those lands have been acquired and are alienated?

Sri K. PUTTASWAMY.—I have already pleaded notice.

ಶ್ರೀ ಡಿ. ಮುನಿಚಿನ್ನಪ್ಪ.—ಜಮಾನುಗಳನ್ನು ಹೆಚ್ಚಿನ ಬೆಲೆಗೆ ಮಾರುತ್ತಿಲ್ಲ. ಚದುರಗಜಕ್ಕೆ ಕೇವಲ 10ರಿಂದ 18 ರೂಪಾಯಿಗಳಂತೆ ಮಾರುತ್ತಿದ್ದೇವೆಂಬುದಾಗಿ ಮಾನ್ಯಮಂತ್ರಿಗಳು ಅಪ್ಪಣೆ ಕೊಡಿಸಿದರು. ಆದರೆ ಚದುರಗಜಕ್ಕೆ 100ರಿಂದ 110 ರೂಪಾಯಿಗಳವರೆಗೆ ಜಮಾನುಗಳನ್ನು ಮಾರಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಅಂತಹವರಿಗೆ ಸರಿಯಾದ ಪರಿಹಾರವನ್ನು ಕೊಡುವುದಕ್ಕೆ ಸ್ವಲ್ಪ ಸಹಾಯ ಮಾಡಿ ಬುದ್ಧೀ.

[No Answer]

ಶ್ರೀ ಡಿ. ಮುನಿಚಿನ್ನಪ್ಪ.—ಬೆಂಗಳೂರು ಕಾರ್ಪೊರೇಷನ್ನಿನಿಂದ ನಾಲ್ಕು ಮಂದಿಯನ್ನು ಈ ಮಂಡಲಿಗೆ ನಾಮಿನೇಟ್ ಮಾಡಿದ್ದೀರಿ. ಅವರು ಸಿಟಿ ಕಾರ್ಪೊರೇಷನ್ನಿನಿಂದ ಹೋಗಿರುತ್ತಾರೆ. ತಾಲ್ಲೂಕು ಕಡೆಯಿಂದ ಯಾರನ್ನು ನಾಮಿನೇಟ್ ಮಾಡಿಲ್ಲ. ಆದ್ದರಿಂದ ತಾಲ್ಲೂಕು ಕಡೆಗಳಿಂದ ಇನ್ನು ಮುಂದೆ ಯಾರಾದರೂ ಒಬ್ಬಿಬ್ಬರು ಸದಸ್ಯರುಗಳನ್ನು ಆ ಮಂಡಲಿಗೆ ನಾಮಿನೇಟ್ ಮಾಡುವುದಕ್ಕಾಗುತ್ತದೆಯೇ?

ಶ್ರೀ ಬಿ. ಡಿ. ಜತ್ತಿ (ಹಣಕಾಸಿನ ಮಂತ್ರಿಗಳು).—ಈಗಿರತಕ್ಕಂಥ ಸದಸ್ಯರು ಅವರನು ಪ್ರತಿನಿಧಿಸಬಲ್ಲರು.

———